# ಎನ್ಐಟಿಕೆ 64ನೇ ಸಂಸ್ಥಾಪನಾ ದಿನಾಚರಣೆ
# ದಿ.ಯು.ಎಸ್.ಮಲ್ಯರ ದೂರದೃಷ್ಟಿತ್ವ ಸ್ಮರಣೆ

■ **ವಿಕ ಸುದ್ದಿಲೋಕ** ಸುರತ್ಕಲ್

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕರ್ನಾಟಕ (ಎನ್ಐಟಿಕೆ)ದ 64ನೇ ಸ್ಥಾಪನಾ ದಿನಾಚರಣೆಯನ್ನು ಭಾನುವಾರ ಎನ್ಐಟಿಕೆಯಲ್ಲಿ ಆಚರಿಸಲಾಯಿತು.

ಸುರತ್ಕಲ್‌ನಲ್ಲಿ ಎನ್ಐಟಿಕೆ ಸ್ಥಾಪನೆಗೆ ಕಾರಣಕರ್ತರಾದ ಕರಾವಳಿ ಕರ್ನಾಟಕದ ಪ್ರಗತಿಯ ರೂವಾರಿ ದಿ.ಶ್ರೀನಿವಾಸ ಮಲ್ಯರ ಪ್ರತಿಮೆಗೆ ಗೌರವಾರ್ಪಣೆ ನಡೆಯಿತು. ಅವರು ಕರಾವಳಿಗೆ ತಂದಿದ್ದ ವಿವಿಧ ಯೋಜನೆಗಳನ್ನು ಉಲ್ಲೇಖಿಸಿ ಅವರ ದೂರದೃಷ್ಟಿತ್ವಸ್ಮರಿಸಲಾಯಿತು .

ಎನ್ಐಟಿಕೆ ಪ್ರಾಧ್ಯಾಪಕರು ಮಾತನಾಡಿ ಸಂಸ್ಥೆಯ ಭವ್ಯ ಇತಿಹಾಸ ಸ್ಮರಿಸಿದರು.

ಪರಮವೀರ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಪುರಸ್ಕೃತ ಏರ್ ಮಾರ್ಷಲ್, ಎನ್ಐಟಿಕೆ 1969 ಬ್ಯಾಚ್‌ನ ಹಳೆ ವಿದ್ಯಾರ್ಥಿ ಬಿ.ಯು. ಚೆಂಗಪ್ಪ ಮುಖ್ಯ ಅತಿಥಿಯಾಗಿದ್ದರು. ಎನ್‌ಸಿಸಿ ಘಟಕದ ಕರ್ನಲ್ ಅನಿಲೇಶ್ ಕೌಶಿಕ್ ನೇತೃತ್ವದಲ್ಲಿ ಕ್ಲೈಂಬಿಂಗ್ ವಾಲ್ ಉದ್ಘಾಟಿಸಲಾಯಿತು.



ಎನ್ಐಟಿಕೆ ಆಲುಮ್ನಿ ಅಸೋಸಿಯೇಶನ್ ಸ್ಥಾಪಕ ಸದಸ್ಯ ಯಜ್ಞನಾರಾಯಣ ಕಮ್ಮಾಜೆ, ಉದ್ಯಮಿ ಎ.ಎಸ್. ಕಾರಂತ್, ಪವನ ಶಕ್ತಿ ಸಲಹೆಗಾರ ಎಂ.ನಿರಂಜನ್ ಮತ್ತಿತರರು ಉಪಸ್ಥಿತರಿದ್ದರು. ಎನ್ಐಟಿಕೆ ಜಾಗತಿಕ ಸಮಾವೇಶದ ಲಾಂಛನ ಬಿಡುಗಡೆ, ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಿದ್ದ 27 ಕ್ಯಾಂಪಸ್ ಮಕ್ಕಳಿಗೆ ಪ್ರಮಾಣ ಪತ್ರ, ವಿದ್ಯಾರ್ಥಿ ವೇತನ ವಿತರಿಸಲಾಯಿತು. ಎನ್ಐಟಿಕೆ ನಿರ್ದೇಶಕ ಪ್ರೊ. ರವಿ ಅಭಿನಂದಿಸಿ, ಎನ್ಐಟಿಕೆ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಯಾಗಿ ಉತ್ತಮ ಪರಂಪರೆ ಮತ್ತು ದಾಖಲೆ ಹೊಂದಿರುವುದು ಶ್ಲಾಘನೀಯ ಎಂದರು.

Vijaya Karnataka, Date: 08/08/23, p. no - 01